◆ ನಿಮ್ಮ ಪ್ರಕಾರ ಮಕ್ಕಳ ಸಾಹಿತ್ಯ ಮೀಮಾಂಸೆ ಏನಾಗಿರಬೇಕು?

ಮಕ್ಕಳ ಸಾಹಿತ್ಯ ಮಕ್ಕಳಿಗಾಗಿ ಅಂತ ರಚನೆಗೊಳ್ಳುವುದಿಲ್ಲ. ಅದು ಲೇಖಕರ ಒಳತುಡಿತದ ಭಾಗವಾಗಿಯೇ ಹೊರಹೊಮ್ಮುತ್ತದೆಯೇ ವಿನಃ ಯಾರನ್ನೂ ಉದ್ದೇಶವಿಟ್ಟುಕೊಂಡಲ್ಲ. ಹಾಗೆಂದು ಮಕ್ಕಳ ಸಾಹಿತ್ಯದ ಓದುಗರು ಮಕ್ಕಳಲ್ಲವೆಂದು ಹೇಳುತ್ತಿಲ್ಲ. ಬಾಲ್ಯತನದ ಕುರಿತು, ಎಳೆಯರ ಪಾತ್ರಗಳೇ ಹೆಚ್ಚು ಇರುವುದರಿಂದಲೇ ಮಕ್ಕಳೂ ಸಹಜವಾಗಿ ಇದರ ಓದುಗರಾಗಿರುತ್ತಾರೆ. ಸಿ.ಎಸ್. ಲೂಯಿಸ್, ಫಿಲಿಪ್ ಪುಲ್‌ಮನ್ ಅವರುಗಳೆಲ್ಲಾ ಮಕ್ಕಳ ಸಾಹಿತ್ಯವನ್ನು ಮಾಧ್ಯಮವನ್ನಾಗಿ ಮಾಡಿ ಕೊಂಡು, ಇದು ನನ್ನ ಅಗತ್ಯದ ಬರವಣಿಗೆಯೆಂದೇ ಬಾಲ್ಯದ ಕಥೆಗಳನ್ನು ಹೇಳಿದ್ದಾರೆ. ಪೆರ್ರಿ ನೊಡಲ್‌ಮನ್ 'ಬಾಲ್ಯ ಉಳಿಸಿಕೊಳ್ಳುವುದು ಎಂದರೆ ಬಾಲಿಶವಾದುದಲ್ಲ; ಜೀವನಮೌಲ್ಯವಾಗಿ ಕಂಡುಕೊಳ್ಳುವುದು' ಎನ್ನುತ್ತಾನೆ. ಮಕ್ಕಳ ಸಾಹಿತ್ಯವೆಂದರೆ, ವಿಲಿಯಮ್ ಮೈನೆ ಹೇಳುವ ಹಾಗೆ 'ಕಳೆದುಹೋದ ನನ್ನದೇ ಬಾಲ್ಯಕ್ಕಾಗಿ ನಾನು ಬರೆಯುವುದು'. ಒಟ್ಟಾರೆ ನಮ್ಮೊಳಗೇ ಇರುವ ನಮ್ಮ ಬಾಲ್ಯದ ಮರು ಹುಡುಕಾಟವೇ ಮಕ್ಕಳ ಸಾಹಿತ್ಯ. ಇದೊಂದು ಹೊಸ ಹೊರಳು ಎಂದು ಕನ್ನಡ ಮನಸ್ಸುಗಳು ಗಮನಿಸಿಲ್ಲವಾದ್ದರಿಂದ ಇದೊಂದು ಮೀಮಾಂಸೆ ಎಂದು ಒಪ್ಪಿಕೊಳ್ಳುತ್ತಿಲ್ಲ.

◆ ಮಕ್ಕಳ ಸಾಹಿತ್ಯದಲ್ಲಿ ವಾಸ್ತವಕ್ಕಿಂತ ಫ್ಯಾಂಟಸಿ ಜಗತ್ತೇ ಮುನ್ನೆಲೆಗೆ ಬರುತ್ತಿದೆ. ಇದಕ್ಕೆ ಕಾರಣಗಳೇನು?

ಮಕ್ಕಳ ಜಗತ್ತಿನೊಳಗೆ ಸಹಜವಾಗಿ ವಾಸ್ತವಕ್ಕಿಂತ ಕಲ್ಪನೆಗೆ ಹೆಚ್ಚು ಸ್ಥಾನವಿರುತ್ತದೆ. ಮಕ್ಕಳು ಯಾವಾಗಲೂ ಅಪರಿಮಿತವಾದ ಕಲ್ಪನಾ ಲೋಕದಲ್ಲಿ ವಿಹರಿಸಲು ಇಷ್ಟಪಡುತ್ತಿರುತ್ತಾರೆ. ಹಾಗಾಗಿ ಫ್ಯಾಂಟಸಿ ಬರಹಗಳು ನನ್ನನ್ನೂ ಒಳಗೊಂಡಂತೆ ಮಗು ಮನಸ್ಸಿನ ಯಾರಿಗೇ ಆದರೂ ಇಷ್ಟವಾಗುತ್ತವೆ. ಇದರ ಮಧ್ಯೆಯೂ ವರ್ತಮಾನದಲ್ಲಿ ಹ್ಯಾಂಡಲ್ ವಿತ್ ಕೇರ್‌ನಲ್ಲಿರುವ ಮಕ್ಕಳಿಗೆ ಬದುಕಿನ ಕಟು ವಾಸ್ತವ, ನೋವು, ಸಂಕಟ, ಸಾವುಗಳ ಪರಿಚಯದ ಅಗತ್ಯವೂ ಇದೆ. ಹಾಗಾಗಿ ಬರಹಗಾರ ವರ್ತಮಾನದ ಎಚ್ಚರದೊಳಗಿದ್ದುಕೊಂಡೇ ಫ್ಯಾಂಟಸಿ ಸೃಷ್ಟಿಸಬೇಕಿದೆ.

◆ ನಿಮ್ಮ ಬಹುಪಾಲು ಕಥೆಗಳು ಮಕ್ಕಳ ಮುಗ್ಧತೆ, ಸಂಕಟ, ಕನಸು, ಹೃದಯ ವೈಶಾಲ್ಯ, ಕಲಿಯುವ ಆಸಕ್ತಿಯನ್ನು ತೆರೆದಿಡುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರಾಗಿರುವುದರಿಂದ ಇಂತಹ ಅನುಭವಗಳು ನಿಮಗೆ ದಕ್ಕಿದವಾ ಹೇಗೆ?

ನಾನೂ ಗ್ರಾಮೀಣ ಪ್ರದೇಶದವನೇ ಆಗಿರುವುದರಿಂದ ಈ ಅನುಭವಗಳು ನನ್ನವೂ ಕೂಡ ಆಗಿವೆ. ಹಾಗಾಗಿ ಕಥೆಗಳಿಗೋಸ್ಕರ ಕೃತಕವಾಗಿ ಏನನ್ನೂ ತರುವ ಪ್ರಯತ್ನ ಮಾಡಿಲ್ಲ. ನಾನು ಆಯ್ದುಕೊಂಡ ವಸ್ತುಗಳೇ ಹಾಗಿದ್ದವು. ಅಥವಾ ನಾನು ಅಂಥವುಗಳನ್ನೇ ಆಯ್ದುಕೊಂಡೆ ಎನ್ನಬಹುದು. ಮತ್ತೊಂದು, ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇದುವರೆಗೆ ಬಂದ ಬರಹಗಳಲ್ಲಿ ನಗರದ, ಮಧ್ಯಮ ವರ್ಗದ ಸಂವೇದನೆಯೇ ಹೆಚ್ಚಾಗಿತ್ತು. ನನ್ನ ಸುತ್ತಲಿನ ಗ್ರಾಮೀಣ ವಲಯದ ಮಕ್ಕಳು, ಅವರ ಬಾಲ್ಯ, ಅಪರಿಮಿತವಾದ ಅವರ ಪ್ರತಿಭಾಶಕ್ತಿ, ಬೆಟ್ಟದಷ್ಟು ಕಷ್ಟಗಳನ್ನೆಲ್ಲಾ ಕಡ್ಲೆ ತಿಂದಷ್ಟು ಸುಲಭವಾಗಿ ಜೀರ್ಣಿಸಿಕೊಳ್ಳುವ ಅವರ ಆತ್ಮವಿಶ್ವಾಸವನ್ನು ನಾನು ಸಾಹಿತ್ಯದಲ್ಲಿ ದಾಖಲು ಮಾಡದೆ ಇನ್ನ್ಯಾರು ಮಾಡಿಯಾರು ಅನ್ನಿಸಿತು. ಹಾಗಾಗಿಯೇ 'ನೋಟ್‌ಬುಕ್' ತೆರೆದು ಕೊಂಡಿತು. ಜೊತೆಗೆ ಶಿಕ್ಷಕನಾಗಿರುವುದರಿಂದ ಮಕ್ಕಳೊಡನೆ ಒಡನಾಡುವ ಮೂಲಕ ನನ್ನೊಳಗಿನ ಬಾಲ್ಯವನ್ನು ಮತ್ತೂ ಜಾಗೃತಗೊಳಿಸಿಕೊಳ್ಳಲು ಅನುಕೂಲವಾಯಿತೆನ್ನಬಹುದು.

◆ 'ನೋಟ್ ಬುಕ್' ಸಂಕಲನದಲ್ಲಿ ಬಣ್ಣದ ಕಾಗದ